

ಮರಗಳ ಮೂಲಕ
ಕಾಣುವ ಭೂತಾನದ
ಜಮೋಲಹರಿ ಶಿಖರ



ಹಿಮಾಲಯಿಗರ ಮನೆ

ಭೂತಾನದ ಪಾರೊದಲ್ಲಿ ನಾವಿದ್ದ ವಸ್ತಿಯಿಂದ ಟಿಬೆಟ್ ಗಡಿಯಲ್ಲಿರುವ ಜಮೊಲಹರ್ ಎಂಬ ಹಿಮಪರ್ವತವು, ನೆಲದಿಂದ ಬಿಳಿಯ ನಾಲಗೆಯೊಂದು ಆಗಸಕ್ಕೆ ಚಾಚಿದಂತೆ, ಹಸಿರುಹೊನ್ನಿನ ಉಂಗುರಕ್ಕೆ ಜಡಿದ ಖಚಿತವಜ್ರದಂತೆ ತೋರುತ್ತಿತ್ತು. ಭೂತಾನದಲ್ಲಿ ದೋಖಲಾ ಪಾಸ್ ಎಂಬ ಜಾಗವಿದೆ. ಅಲ್ಲಿ ನಿಂತರೆ ಟಿಬೆಟ್ ಗಡಿಯಲ್ಲಿರುವ ನೂರಾರು ಮೈಲಿಯುದ್ದದ ಹಿಮಾವೃತ ಪರ್ವತಶ್ರೇಣಿ ಒಂದೇ ನೋಟದಲ್ಲಿ ಲಭ್ಯ. ಭೂತಾನವನ್ನು ಚೀನಿಯರು ನೆಲಮಾರ್ಗದಲ್ಲಿ ಬಂದು ಆಕ್ರಮಿಸಲು ಸಾಧ್ಯವೇ ಇಲ್ಲದಂತೆ ನಿಸರ್ಗ ಕಟ್ಟಿದ ಹಿಮಗೋಡೆಯದು.

ತಮ್ಮ ಚೆಲುವಿನಿಂದ ಸೆಳೆಯುವ ಈ ಹಿಮಪರ್ವತಗಳು ಅಲ್ಲಿರುವ ಜೀವರಾಶಿಗೆ ನಾನಾ ಕಷ್ಟದ ಪರಂಪರೆಯನ್ನೂ ನಿರ್ಮಿಸಿವೆ. ತಮ್ಮ ಮಾರಣಾಂತಕ ಚಳಿಯಿಂದ ಸಾಯಿಸುವ ಇವನ್ನು ಏರಲು ಹೋಗಿ, ದೀಪದ ಕುಡಿಗೆರಗುವ ಪತಂಗಗಳಂತೆ ಎಷ್ಟೊಂದು ಸಾಹಸಿಗಳು ಜೀವ ಕಳೆದುಕೊಂಡಿರುವರೊ? ಒಂದು ಪರ್ವತಸರಣಿಯಿಂದ ಇನ್ನೊಂದಕ್ಕೆ ದಾಟುವ ಪಾಸುಗಳಲ್ಲಿ, ಮಣ್ಣು ಕಡಿದಂತೆ ಹಿಮ ಕಡಿದು ದಾರಿ ನಿರ್ಮಿಸಬೇಕು. ರೋಹತಾಂಗ್ ಪಾಸಿನಲ್ಲಿ ರಸ್ತೆಗಳು ಆರಾರು ತಿಂಗಳು ಬಂದಾಗುತ್ತವೆ. ಚಳಿಗಾಲದಲ್ಲಿ ಮನೆಬಿಟ್ಟು ಕೆಳಗಿನ ಊರುಗಳಿಗೆ ವಲಸೆ ಹೋಗುವ ಕೇದಾರನಾಥ, ಬದರಿನಾಥ ವಾಸಿಗಳ ಪಾಡಂತೂ ಹೇಳಬಾರದು. ಮನೆ, ಹೊಲ, ದನಕರು ಬಿಟ್ಟು ಹೋಗಬೇಕು. ಆದರೆ ಈ ಅಜ್ಞಾತವಾಸ ಅವರಿಗೆ ಅಭ್ಯಾಸವಾಗಿದೆ. ನರಲೋಕದ ವಾಯಿದೆ ಮುಗಿಯಲು ಭೂಮಿ ಬಿಟ್ಟು ಸ್ವರ್ಗಕ್ಕೆ ಹೋಗಲು ಚಡಪಡಿಸುವ ಶಾಪಗ್ರಸ್ತ ದೇವತೆಗಳಂತೆ, ರಂಗನತಿಟ್ಟಿಗೆ ಬಂದು ಮರಿಮಾಡಿಕೊಂಡು ಹೋಗುವ ಪಕ್ಷಿಗಳಂತೆ ಅವರು ಕಾಣುವರು.

ಕುರಿಮೇಕೆಗಳ ಜತೆ ದಿನನಿತ್ಯ ಅಲೆವ ಹಿಮಾಲಯದ ಪಶುಪಾಲಕರಿಗೆ ಪರ್ವತಗಳ ಜತೆ ಸಲುಗೆ. ನಮಗೋ ಎದೆಯುಬ್ಬಸ. ಅವುಗಳ ಸೆರೆಯಲ್ಲೇ ಸುತ್ತುವಾಗ ಯಾವಾಗ ಬಯಲು ಬಂದೀತು ಎಂದು ಮನ ಹಂಬಲಿಸುತ್ತದೆ. ಬಯಲು ಕಂಡಾಗ, ಬಿಡುಗಡೆಯ ನಿಟ್ಟುಸಿರು ಹೊಮ್ಮುತ್ತದೆ. ಹಿಮಾಲಯದಲ್ಲಿ 15000 ಅಡಿಯ ಬಳಿಕ ಸಸ್ಯಜಗತ್ತು ಇರುವುದಿಲ್ಲ. ಕೇವಲ ಕಠೋರ ಪಾಷಾಣದ ಬೋಳು ಪರ್ವತ. ಒಂದರ್ಥದಲ್ಲಿ ಮರುಭೂಮಿ. ಲಡಾಕ್ ಇಂತಹ ಭೂರಚನೆಯಿಂದ ಕೂಡಿದೆ. ಇಂತಹ ಬೋಳುಪರ್ವತಗಳು ಭೂತಾನಿನಲ್ಲೂ ಇರಾನಿನಲ್ಲೂ ಇವೆ. ಒಮ್ಮೊಮ್ಮೆ ಅನಿಸುತ್ತದೆ: ಹಿಮಹೊತ್ತು ನಿರ್ಲಿಪ್ತತೆ ಮತ್ತು ಗಾಂಭೀರ್ಯಗಳಿಂದ ನಿಷ್ಕರುಣ ನಿಲುವಿನಲ್ಲಿ ನಿಲ್ಲುವ ಈ ಶಿಖರಗಳ ದೊಡ್ಡಸ್ತಿಕೆಯಾದರೂ ಏನು? ಧಮಕಿ ಹಾಕುವಂತೆ ಬೆಳೆದು ನಿಂತಿರುವ, ಆಡಿದರೆ ಮುಗಿಲ ಜತೆಯೇ ಆಡುತ್ತೇನೆ ಎಂದು ಸೊಕ್ಕಿರುವ, ಲೋಕಕ್ಕಿಂತ ಮೊದಲು ಬೆಳಕನುಣ್ಣುವ, ತಮ್ಮೆತ್ತರದಿಂದ ಕಣಿವೆಗೆ ಕೀಳರಿಮೆ ಹುಟ್ಟಿಸುವ ಈ ಶಿಖರಗಳಲ್ಲಿ ಗಿಡವಿಲ್ಲ, ಮರವಿಲ್ಲ, ಹಕ್ಕಿಯಿಲ್ಲ, ಮನೆಯಿಲ್ಲ, ಜನವಿಲ್ಲ. ಇವಕ್ಕೆ ಹೋಲಿಸಿದರೆ ಕೆಳಗಿನ ಕಣಿವೆಗಳಲ್ಲಿ ಬಯಲಿದೆ, ಜಲವಿದೆ, ಊರಿದೆ. ಎಮ್ಮೆ, ಕುರಿ, ಕುದುರೆ ಮೇಯುತ್ತವೆ. ಗಿಡ ಮರ ಹುಲ್ಲು ಹೂವು ಬೆಳೆಯುತ್ತವೆ. ಹಕ್ಕಿ ಹಾಡುತ್ತದೆ. ರೈತರು ಸೇಬು, ಗೋಧಿ, ಬಾದಾಮಿ, ಕೇಸರಿ, ಅಕ್ರೋಟ ಬೆಳೆಯುತ್ತಾರೆ.